**ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 24**
**ಪಿಡಬ್ಲೂಃ 21**

ಸಾಕ್ಷಿದಾರರ ಹೆಸರು : ಪ್ರವೀಣಕುಮಾರ

ತಂದೆಯ ಹೆಸರು : ಬೊಮ್ಮಲಿಂಗಪ್ಪ

ವಯಸ್ಸು : 34 ವರ್ಷ

ಉದ್ಯೋಗ : ಪಿ.ಎಸ್.ಐ., ಸೈಬರ್ ಕ್ರೈಂ ಪೋಲೀಸ ಠಾಣೆ

ವಾಸಸ್ಥಳ : ಗದಗ.

- - - - -

**ಇಂದು ದಿನಾಂಕ 09.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1) ನಾನು ದಿನಾಂಕ **14.06.2023** ರಿಂದ **06.07.2024** ರವರೆಗೆ ಕೊಲ್ಹಾರ ಪೋಲೀಸ ಠಾಣೆಯಲ್ಲಿ ಪಿ.ಎಸ್.ಐ. ಎಂದು ಸೇವೆ ಸಲ್ಲಿಸಿದ್ದೇನೆ.

**2)** ದಿನಾಂಕ **03.11.2023** ರಂದು ಚಾ.ಸಾ.**1** ಫಿರ್ಯಾದಿಯು ಠಾಣೆಗೆ ಹಾಜರಾಗಿ ಲಿಖಿತ ದೂರು ಕೊಟ್ಟಿದ್ದು, ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ.**102/2023** ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ಪ್ರ.ವ.ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮೂಲ ಫಿರ್ಯಾದಿ ಮತ್ತು ಪ್ರ.ವ.ವರದಿಯನ್ನು ರವಾನಿಸಿರುತ್ತೇನೆ. ಸಾಕ್ಷಿಯು ಗುರುತಿಸಿದ ಫಿರ್ಯಾದಿಯ ಮೇಲಿನ ಸಹಿಯನ್ನು ನಿ.ಪಿ.**1**(ಸಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ.**37** ಎಂದು, ಸಾಕ್ಷಿಯ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 24**
**ಪಿಡಬ್ಲೂಃ 21**

ಸಹಿಯನ್ನು ನಿ.ಪಿ.**37(ಎ)** ಎಂದು ಗುರುತಿಸಲಾಯಿತು. ದಿನಾಂಕ **04.11.2023** ರಂದು ಪ್ರಸ್ತುತ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ.**26** ರವರಿಗೆ ಹಸ್ತಾಂತರಿಸಿರುತ್ತೇನೆ.

**3)** ದಿನಾಂಕ **17.01.2024** ರಂದು ತನಿಖಾಧಿಕಾರಿಗಳ ಆದೇಶದ ಮೇರೆಗೆ **1** ನೇ ಆರೋಪಿ ಮತ್ತು **2** ನೇ ಆರೋಪಿಯನ್ನು ಮಡ್ಯಾಳ ಕ್ರಾಸಿನಲ್ಲಿ ಹಿಡಿದುಕೊಂಡು ಚಾ.ಸಾ.**26** ರವರ ಮುಂದೆ ಹಾಜರುಪಡಿಸಿರುತ್ತೇನೆ. ದಿನಾಂಕ **02.04.2024** ರಂದು ಪರಾರಿ ಇರುವ **3** ಮತ್ತು **4** ನೇ ಆರೋಪಿತರ ವಿಳಾಸದಲ್ಲಿ ಹುಡುಕಾಡಲಾಗಿ ಅವರು ಸಿಕ್ಕಿರುವುದಿಲ್ಲ, ಕಾರಣ ನಾನು ಸದರಿ ವಿಷಯದ ಕುರಿತು ಚಾ.ಸಾ.**26** ರವರ ಮುಂದೆ ಮಾಹಿತಿಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ ಎಂ.ಎಸ್.ಕೆ., ವಕೀಲರಿಂದ 5 ನೇ ಆರೋಪಿ ಪರವಾಗಿಃ</u>**

**4)** ಫಿರ್ಯಾದಿಯು ನನ್ನ ಮುಂದೆ ನಿ.ಪಿ.**1** ರ ಪ್ರಕಾರ ದೂರು ನೀಡಿದಾಗ ಅದನ್ನು ಓದಿ ಪರಿಶೀಲಿಸಿರುತ್ತೇನೆ. ಮುದ್ದೇಬಿಹಾಳ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿಗಳು ಶ್ರೀಗಂಧದ ಮರ ಕಳ್ಳತನವಾದ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಅರಣ್ಯಾಧಿಕಾರಿಗಳು ಮಾಡಿದ ತನಿಖೆಯ ವಿವರಗಳನ್ನು ಪಡೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕೇವಲ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 24**
**ಪಿಡಬ್ಲೂಃ 21**

ಪ್ರ.ವ.ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**5)** ನಿ.ಪಿ.**24** ರಂತೆ ಅರಣ್ಯ ಅಧಿಕಾರಿಗಳು ಒಂದು ಪ್ರ.ವ.ವರದಿ ತಯಾರಿಸಿರುತ್ತಾರೆ ಎಂದರೆ ನಿಜ. ಸದರಿ ಪ್ರ.ವ.ವರದಿಯಲ್ಲಿ ಗಾಳಿಗೆ ಬಿದ್ದ ಮರಗಳನ್ನು ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಅರಣ್ಯಾಧಿಕಾರಿಗಳು ಫಿರ್ಯಾದಿಯ ಜಮೀನಿಗೆ ಹೋಗಿ ಪರಿಶೀಲಿಸಿ ಶ್ರೀಗಂಧದ ಮರಗಳು ಗಾಳಿಗೆ ಬಿದ್ದಿರುತ್ತವೆ ಎಂದು ದಿನಾಂಕ **09.07.2023** ರಂದು ಪ್ರ.ವ.ವರದಿಯನ್ನು ತಯಾರಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ವಲಯ ಅರಣ್ಯಾಧಿಕಾರಿಗಳು, ಮುದ್ದೇಬಿಹಾಳ ಇವರು ಸಂಪೂರ್ಣ ವಿವರ ಒಳಗೊಂಡ ಪ್ರ.ವ.ವರದಿ ಮತ್ತು ನಿ.ಪಿ.**25** ರ ಸ್ಥಳ ಪಂಚನಾಮೆಯನ್ನು ಮತ್ತು ನಿ.ಪಿ.**26** ರ ಸ್ಥಳ ಪಂಚನಾಮೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಅದು ಗೊತ್ತಿಲ್ಲ, ಸದರಿ ವರದಿಯನ್ನು ಸಿ.ಪಿ.ಐ. ಅವರ ಮುಂದೆ ಸಲ್ಲಿಸಲಾಗಿತ್ತು ಎಂದು ನುಡಿಯುತ್ತಾರೆ.

**6)** ಫಿರ್ಯಾದುದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ದೂರು ಪಡೆದು, ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 24**
**ಪಿಡಬ್ಲೂಃ 21**

**<u>ಪಾಟೀ ಸವಾಲುಃ ಶ್ರೀ ಜಿ.ವಿ.ಜಿ., ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ</u>**

**7) 1** ಮತ್ತು **2** ನೇ ಆರೋಪಿತರನ್ನು ದಸ್ತಗಿರಿ ಮಾಡುವ ಸಮಯದಲ್ಲಿ ಅವರ ಬಳಿ ಇದ್ದ ಮುದ್ದೆಮಾಲುಗಳ ಬಗ್ಗೆ ಪಂಚನಾಮೆಯನ್ನು ಜರುಗಿಸಿಲ್ಲ. ಚಾ.ಸಾ.**26** ಸಿ.ಪಿ.ಐ. ಅವರು ಆರೋಪಿತರನ್ನುಹಿಡಿದುಕೊಂಡು ಬರಲು ಲಿಖಿತ ಆದೇಶ ನೀಡಿರಲಿಲ್ಲ ಎಂದರೆ ಸರಿ. ಆದರೆ ಸಾಕ್ಷಿಯು ಮೌಖಿಕ ಆದೇಶ ನೀಡಿರುತ್ತಾರೆ ಎಂದು ನುಡಿಯುತ್ತಾರೆ. **1** ಮತ್ತು **2** ನೇ ಆರೋಪಿತರನ್ನು ಚಾ.ಸಾ.**26** ರವರ ಮುಂದೆ ಹಾಜರು ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಪ್ರಸ್ತುತ ಪ್ರಕರಣದಲ್ಲಿ ಭಾಗಿಯಾಗಿರದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದೂರು ಪಡೆದು, ಸುಳ್ಳು ಪ್ರ.ವ.ವರದಿ ತಯಾರಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಆರೋಪಿತರು ಭಾಗಿಯಾಗಿರದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ **5** ನೇ ಆರೋಪಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಉಳಿದ ಆರೋಪಿತರು ಅನುಮೋದಿಸಿರುತ್ತಾರೆ**).**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.